## ಅಪ್ಪ ಎದ್ದಿರುತ್ತಾರೆ!

ನನ್ನ ನಾಲ್ಕು ವರ್ಷದ ಮೊಮ್ಮಗಳನ್ನು ತರ್ಕದಲ್ಲಿ ಸೋಲಿಸುವುದು ಅಸಾಧ್ಯ ಎಂದರೆ ಅತಿಶಯೋಕ್ತಿಯಲ್ಲ. ನನ್ನ ಹೇಳಿಕೆಗೆ ಪುರಾವೆ ಒದಗಿಸುವಂತಿದೆ ಈ ಪ್ರಸಂಗ.

ಮೊಮ್ಮಗಳು ಅವಳ ಅಮ್ಮನೊಡನೆ ಅಮೆರಿಕದಿಂದ ಬೆಂಗಳೂರಿಗೆ ಬಂದಿದ್ದಾಗ ನಡೆದ ಘಟನೆ ಇದು. ಅಂದು ರಾತ್ರಿ ಮನೆಯಲ್ಲಿ ಎಲ್ಲರೂ ಮಲಗಿದ್ದರು. ನನ್ನೊಡನಿದ್ದ ಮೊಮ್ಮಗಳು ಮಾತ್ರ ನಿದ್ದೆ ಮಾಡಲು ನಿರಾಕರಿಸುತ್ತಿದ್ದಳು. 'ನಮ್ಮಿಬ್ಬರನ್ನು ಬಿಟ್ಟು ಪ್ರಪಂಚದಲ್ಲಿ ಎಲ್ಲರೂ ಮಲಗಿದ್ದಾರೆ, ನಾವೂ ಮಲಗಿ ನಿದ್ದೆ ಮಾಡೋಣ' ಎಂದು ಅವಳನ್ನು ಪುಸಲಾಯಿಸಲು ಪ್ರಯತ್ನಿಸಿದೆ. 'ಇಲ್ಲ, ಅಮೆರಿಕದಲ್ಲಿರುವ ಅಪ್ಪ ಎದ್ದಿರುತ್ತಾರೆ, ಅಲ್ಲೀಗ ಬೆಳಗ್ಗೆ' ಎನ್ನುವ ಮೂಲಕ ನನ್ನ ಹೇಳಿಕೆಯನ್ನು ಹುಸಿಯಾಗಿಸಿ ತಾನು ವಿಜಯಿಯಾದಳು.

**ಮಂಜುನಾಥ ಡಿ.ಎಸ್.**



## ಬುದ್ಧಿವಂತ ಪತ್ನಿ

ಪತಿಪತ್ನಿಯರಾದ ಶೀನಿ ಮತ್ತು ಪಮ್ಮಿಯ ನಡುವೆ ಯಾವುದೋ ಕಾರಣಕ್ಕೆ ಜಗಳ ಶುರು ಆಗಿ ಇಬ್ಬರೂ ಮಾತು ನಿಲ್ಲಿಸಿದ್ದರು. ಪಮ್ಮಿಗೆ ತುಂಬಾ ಬೇಜಾರಾಗಿತ್ತು.
ಪಮ್ಮಿ: ರೀ... ನಾನು ಹತ್ತು ಎಣಿಸುವುದರೊಳಗೆ ನೀವು ಮಾತನಾಡದೇ ಹೋದರೆ ನಾನು ವಿಷ ಸೇವನೆ ಮಾಡುವೆ ಎಂದವಳೇ ಎಣಿಕೆ ಶುರು ಮಾಡಿ 'ಒಂದು..' ಎಂದಳು. ಶೀನಿ ಮಾತನಾಡಲಿಲ್ಲ. ಪಮ್ಮಿ– ಎರಡು.. ಶೀನಿ ಮತ್ತೂ ಏನೊಂದೂ ಮಾತನಾಡಲಿಲ್ಲ ಪಮ್ಮಿ– 'ರೀ... ಹೇಳಿ ಪ್ಲೀಸ್' ಎಂದು ಅಳುವುದಕ್ಕೆ ಆರಂಭಿಸಿದಳು ಶೀನಿ, ಅವಳು ಅಳುವುದನ್ನು ಕಂಡವ 'ಏಯ್... ಮೊದಲು ಎಣಿಕೆ ಮಾಡು ಆಮೇಲೆ...' ಎಂದು ಹೇಳಿದ್ದೇ ತಡ, ಪಮ್ಮಿ ಚಪ್ಪಾಳೆ ತಟ್ಟುತ್ತಾ 'ಸದ್ಯ ನೀವು ಮಾತಾಡಿದ್ರಲ್ಲಾ ಸಾಕು... ಇನ್ನು ನಾನು ಸಾಯಲ್ಲ' ಎಂದು ಹೇಳಿ ಕುಣಿಯತೊಡಗಿದಳು.

**ಅರವಿಂದ ಜಿ. ಜೋಷಿ**



ಕಲೆ: ಗಣೇಶ ಆಚಾರ್ಯ